**ನಿಯಮಗಳು**

೧. ಮೈಸೂರು ದಸರಾ ಕನ್ನಡ ಪುಸ್ತಕ ಮೇಳ-೨೦೧೪ ನ್ನು ೨೪.೦೯.೨೦೧೪ ರಿಂದ ೦೩.೧೦.೨೦೧೪ರವರೆಗೆ ಮೈಸೂರಿನ ಕಾಡಾ ಮೈದಾದಲ್ಲಿ ನಡೆಸಲಾಗುವುದು.

೨. ಮೈಸೂರು ದಸರಾ ಕನ್ನಡ ಪುಸ್ತಕ ಮೇಳ – ೨೦೧೪ರಲ್ಲಿ ಕನ್ನಡ ಪುಸ್ತಕಗಳು ಹಾಗೂ ಕನ್ನಡದಿಂದ ಇತರೆ ಭಾಷೆಗಳಿಗೆ ಭಾಷಾಂತರಗೊಂಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮಾತ್ರ ಅವಕಾಶವಿರುತ್ತದೆ.

೩. ಮಳಿಗೆಯ ವಿಸ್ತೀರ್ಣ ೧೦ x ೧೦ ಅಡಿ

೪. ಮಳಿಗೆ ಒಂದಕ್ಕೆ ಬಾಡಿಗೆ ೨೫೦೦/- + ಠೇವಣಿ ೧೦೦೦/- ಡಿ.ಡಿ.ಯನ್ನು ಆಡಳಿತಾಧಿಕಾರಿಗಳು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪ್ರತ್ಯೇಕವಾಗಿ ಪಡೆಯುವುದು. ಹೆಚ್ಚಿನ ಮಳಿಗೆಯೊಂದಕ್ಕೆ ಬಾಡಿಗೆ ಮೊತ್ತ ಪ್ರತಿ ಮಳಿಗೆಗೆ ರೂ. ೨೫೦೦/- ಡಿ.ಡಿ.ಯನ್ನು ಪ್ರತ್ಯೇಕವಾಗಿ ಪಡೆಯುವುದು.

೫. ನಿಗದಿತ ಅರ್ಜಿಯ ಜೊತೆ ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಅವರ ಹೆಸರಿನಲ್ಲಿ ಡಿ.ಡಿ.ಯನ್ನು ಕಳುಹಿಸಿಕೊಡಬೇಕು. ಪ್ರದರ್ಶಕರು ಮೇಳದಲ್ಲಿ ಭಾಗವಹಿಸಲು ಒಪ್ಪಿ ನಂತರ ಭಾಗವಹಿಸದಿದ್ದರೆ ಅಥವಾ ಭಾಗವಹಿಸಿ ಅವಧಿಯ ಮಧ್ಯದಲ್ಲಿ ತಮ್ಮ ಮಳಿಗೆಯನ್ನು ಮುಚ್ಚಿದರೆ ಬಾಡಿಗೆ ಹಣವನ್ನಾಗಲೀ / ಠೇವಣಿ ಹಣವನ್ನಾಗಲೀ ಹಿಂದಿರುಗಿಸಲಾಗುವುದಿಲ್ಲ.

೬. ಠೇವಣಿ ಹಣವನ್ನು ಮೇಳ ಮುಗಿದ ನಂತರ ಹಿಂದಿರುಗಿಸಲಾಗುವುದು.

೭. ಒಂದಕ್ಕಿಂತ ಹೆಚ್ಚು ಮಳಿಗೆ ಬೇಕಾದರೆ ಮಳಿಗೆ ಒಂದಕ್ಕೆ ರೂ. ೨೫೦೦-೦೦ ಹೆಚ್ಚುವರಿಯಾಗಿ ಪಾವತಿಸಬೇಕು. ಹೆಚ್ಚಿನ ಮಳಿಗೆಗಳಿಗೆ ಠೇವಣಿ ಪಾವತಿ ಮಾಡಬೇಕಾಗಿಲ್ಲ. ಹೆಚ್ಚುವರಿ ಮಳಿಗೆಯನ್ನು ಆದ್ಯತೆಯ ಮೇರೆಗೆ ನೀಡಲಾಗುವುದು.

೮. ೧೦೦ ಶೀರ್ಷಿಕೆ ಪ್ರಕಟಿಸಿರುವ ಪ್ರಕಾಶನ ಸಂಸ್ಥೆಗಳಿಗೆ ಮಾತ್ರ ಅವಕಾಶ ನೀಡಲಾಗುವುದು. ಪ್ರಕಾಶನ ಸಂಸ್ಥೆಗಳು ತಮ್ಮ ಸಂಸ್ಥೆಯಿಂದ ಪ್ರಕಾಶನಗೊಂಡಿರುವ ಪುಸ್ತಕಗಳ ವಿವರಗಳನ್ನು ಈ ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರತಿಯೊಂದು ಮಳಿಗೆಯೂ ಪುಸ್ತಕಗಳಿಂದ ಸಂಪೂರ್ಣವಾಗಿ ಸಜ್ಜಾಗಿರಬೇಕು. ಖಾಲಿ ಇರಬಾರದು.

೯. ಪ್ರತಿ ಮಳಿಗೆ ಮುಂಭಾಗಕ್ಕೆ ಒಂದೇ ರೀತಿಯಲ್ಲಿ ಪ್ರಕಾಶನ ಸಂಸ್ಥೆಯ ಹೆಸರನ್ನು ಅರ್ಜಿಯಲ್ಲಿ ತಿಳಿಸಿದಂತೆ ಬರೆಸಿ ಸಜ್ಜುಗೊಳಿಸಲಾಗುವುದು. ಯಾವುದೇ ಕಾರಣಕ್ಕೂ ವೈಯಕ್ತಿಕ ಬ್ಯಾನರ್, ಫ್ಲೆಕ್ಸ್‌ಗಳನ್ನು ಪ್ರದರ್ಶಿಸಲು ಅವಕಾಶವಿರುವುದಿಲ್ಲ.

೧೦. ಮೇಳದಲ್ಲಿ ಪ್ರದರ್ಶಕರು ಕನಿಷ್ಠ ಶೇಕಡಾ ೨೫ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲೇಬೇಕು.

೧೧. ಪುಸ್ತಕಗಳ ಮಾರಾಟಕ್ಕೆ ತಪ್ಪದೆ ಬಿಲ್ಲನ್ನು ಹಾಕಬೇಕು.

೧೨. ತಮ್ಮ ಮಳಿಗೆಯಿಂದ ಎಷ್ಟು ಪುಸ್ತಕಗಳು ಮಾರಾಟವಾದವು? ಎಷ್ಟು ಮೊಬಲಗು ಆಯಿತು? ಎಂದು ಪ್ರತಿ ಮಳಿಗೆಯವರು ದಿನದ ಕೊನೆಗೆ ಪ್ರಾಧಿಕಾರ ಕಚೇರಿಗೆ ವರದಿ ನೀಡುವುದು.

೧೩. ಪ್ರದರ್ಶನ ಹಾಗೂ ಮಾರಾಟದ ಸಮಯ ಬೆಳಿಗ್ಗೆ ೧೦.೦೦ ರಿಂದ ರಾತ್ರಿ ೮.೦೦ ಗಂಟೆಯವರೆಗೆ ಇರುತ್ತದೆ.

೧೪. ಪ್ರದರ್ಶಕರು ತಮ್ಮ ಮಳಿಗೆಯನ್ನು ತೆರೆಯಲು ಅರ್ಧ ಗಂಟೆ ಮುಂಚಿತವಾಗಿ ಬರಬೇಕು. ಸಕಾಲಕ್ಕೆ ಬಾರದಿದ್ದರೆ ಮಳಿಗೆಯ ಜವಾಬ್ದಾರಿ ವ್ಯವಸ್ಥಾಪಕರದಲ್ಲ ಹಾಗೂ ರಾತ್ರಿ ವೇಳೆಗೆ ೮.೩೦ಕ್ಕೆ ಮಳಿಗೆ ಮುಚ್ಚಿ ಹೊರಹೋಗಬೇಕು.

೧೫. ಸಾರ್ವಜನಿಕರಿಗೆ ಪ್ರವೇಶ ಉಚಿತ.

೧೬. ದಿನಾಂಕ ೨೩.೦೯.೨೦೧೪ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ಡ್ರಾ ಮಾಡುವ ಮೂಲಕ ಮಳಿಗೆಗಳನ್ನು ವಿತರಿಸಲಾಗುವುದು. ಡ್ರಾ ಸಂದರ್ಭದಲ್ಲಿ ಪ್ರದರ್ಶಕರು/ ಪ್ರಕಾಶಕರು ಹಾಜರಿರಬಹುದು.

೧೭. ಪುಸ್ತಕ ಮೇಳದ ಪ್ರಾರಂಭದ ಹಿಂದಿನ ದಿನವೇ ಪ್ರದರ್ಶಕರು ತಮ್ಮ ಮಳಿಗೆಗಳನ್ನು ವಶಕ್ಕೆ ತೆಗೆದುಕೊಂಡು ಸಜ್ಜುಗೊಳಿಸಬೇಕು.

೧೮. ದಿನಾಂಕ:೨೩.೦೯.೨೦೧೪ರಂದು ಸಂಜೆ ೬.೦೦ ಗಂಟೆಯ ಒಳಗೆ ತಮಗೆ ಹಂಚಿಕೆ ಮಾಡಲಾದ ಮಳಿಗೆಯಲ್ಲಿ ವ್ಯವಸ್ಥಿತವಾಗಿ ಪುಸ್ತಕಗಳನ್ನು ಜೋಡಿಸಿ ಕಡ್ಡಾಯವಾಗಿ ಸಜ್ಜುಗೊಳಿಸಿಕೊಂಡಿರಬೇಕು.

೧೯. ಪುಸ್ತಕ ಮಾರಾಟ ಮೇಳದ ಅವಧಿಯಲ್ಲಿ ಮಳಿಗೆಯ ಪ್ರಕಾಶಕರು /ಮಾರಾಟಗಾರರಿಗೆ ಊಟ, ವಸತಿ ಒದಗಿಸುವ ಯಾವುದೇ ವ್ಯವಸ್ಥೆ ಇರುವುದಿಲ್ಲ. ಅವರವರೇ ಸದರಿ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

೨೦. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ೨೨.೦೯.೨೦೧೪ ಮಧ್ಯಾಹ್ನ ೧.೦೦ ಗಂಟೆಯವರೆಗೆ

೨೧. ಎಲ್ಲಾ ವಿಷಯಗಳಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ತೀರ್ಮಾನವೇ ಅಂತಿಮ.

೨೨. ನಿಷೇಧಿತ ಹಾಗೂ ಆಕ್ಷೇಪಾರ್ಹ ಪುಸ್ತಕಗಳನ್ನು ಮಾರಾಟ ಮಾಡಬಾರದು.

೨೩. ಯಾವುದೇ ರೀತಿಯ ಧ್ವನಿವರ್ಧಕಗಳನ್ನು ಮಳಿಗೆಯಲ್ಲಿ ಹಾಕಬಾರದು.

೨೪. ಹೆಚ್ಚುವರಿ ಟೇಬಲ್ ಬೇಕಾದವರು ಹಣ ಪಾವತಿಸಿ ಪಡೆಯಬಹುದು.

೨೫. ಮಳಿಗೆಗಳಲ್ಲಿ ಪುಸ್ತಕಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಮಾರಾಟ ಮಾಡಬಾರದು. ವಿಶ್ವಕೋಶ ಇತ್ಯಾದಿ ಸಂಪುಟಗಳ ಡಿ.ವಿ.ಡಿ.ಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ. (ಉದಾಹರಣೆ : ಸಿ.ಡಿ., ಕ್ಯಾಸೆಟ್, ಇತ್ಯಾದಿಗಳು)

೨೬. ಅರ್ಜಿ ನಮೂನೆ ಹಾಗೂ ನಿಯಮಗಳು ಕನ್ನಡ ಪುಸ್ತಕ ಪ್ರಾಧಿಕಾರದ ವೆಬ್‌ಸೈಟ್ www.kannadapustakapradhikara.com ನಲ್ಲಿ ದೊರೆಯುತ್ತದೆ ಹಾಗೂ ಕನ್ನಡ ಮತ್ತು ಸಂಸ್ಕೃತಿ

**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ದೂರವಾಣಿ ಸಂಖ್ಯೆ : ೦೮೦-೨೨೪೮೪೫೧೬ / ೨೨೧೦೭೭೦೪

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು**
**ಮತ್ತು**
**ಮೈಸೂರು ದಸರಾ ಉತ್ಸವ ಸಮಿತಿ, ಮೈಸೂರು**
**ಇವರ ಸಂಯುಕ್ತಾಶ್ರಯದಲ್ಲಿ**

**ಮೈಸೂರು ದಸರಾ ಕನ್ನಡ ಪುಸ್ತಕ ಮೇಳ - ೨೦೧೪**

ದಿನಾಂಕ ೨೪.೦೯.೨೦೧೪ ರಿಂದ ೦೩.೧೦.೨೦೧೪ ರವರೆಗೆ
ಸ್ಥಳ : ಕಾಡಾ ಮೈದಾನ, ಮೈಸೂರು

**ಡಾ. ಬಂಜಗೆರೆ ಜಯಪ್ರಕಾಶ**
ಅಧ್ಯಕ್ಷರು

**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು

**ಮೈಸೂರು ದಸರಾ ಕನ್ನಡ ಪುಸ್ತಕ ಮೇಳ – ೨೦೧೪**

ಕನ್ನಡ ಪುಸ್ತಕೋದ್ಯಮದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧವಾದ ಕನ್ನಡ ಪುಸ್ತಕ ಪ್ರಾಧಿಕಾರವು ಹಲವಾರು ರಚನಾತ್ಮಕ ಯೋಜನೆಗಳನ್ನು ಕೈಗೊಂಡಿದೆ. ಕನ್ನಡ ಪುಸ್ತಕಗಳ ಸಗಟು ಖರೀದಿ, ರಾಜ್ಯಾದ್ಯಂತ ಕನ್ನಡ ಪುಸ್ತಕ ಮಳಿಗೆಗಳ ಪ್ರೋತ್ಸಾಹ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಾಚನಾಭಿರುಚಿ ಕಮ್ಮಟ ಹಾಗೂ ನನ್ನ ಮೆಚ್ಚಿನ ಪುಸ್ತಕ ಕುರಿತು ಅಭಿಪ್ರಾಯ ಮಂಡನೆ ಸ್ಪರ್ಧೆ, ಅಪರೂಪದ ಅಲಭ್ಯ ಗ್ರಂಥಗಳ ಪುನರ್ ಮುದ್ರಣ, ಲೇಖಕರ – ಪ್ರಕಾಶಕರ – ಮಾರಾಟಗಾರರ – ಓದುಗರ ನಡುವೆ ಚಿಂತನ ಕಮ್ಮಟಗಳನ್ನು ಏರ್ಪಡಿಸುವುದು ಹೀಗೆ ಕನ್ನಡ ಪುಸ್ತಕೋದ್ಯಮ ಬೆಳೆಯಲು ಸರ್ವ ವಿಧದಲ್ಲಿ ನೆರವಾಗುವುದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಆಶಯ. ಈ ಉದ್ದೇಶಕ್ಕೆ ಪೂರಕವಾಗಿ ರಾಜ್ಯಾದ್ಯಂತ ವಿಭಾಗ ಮಟ್ಟದ ಪುಸ್ತಕ ಮೇಳಗಳನ್ನು ನಡೆಸುವುದು ಕೂಡ ಪ್ರಾಧಿಕಾರದ ಯೋಜನೆಗಳಲ್ಲಿ ಒಂದು. ಒಟ್ಟಾರೆ ಕನ್ನಡ ಪುಸ್ತಕೋದ್ಯಮವು ಜನಪರವಾಗಿ, ವ್ಯಾಪಕವಾಗಿ, ಸಮಗ್ರ 'ಕೃತಿ–ಸಂಸ್ಕೃತಿ'ಯ ಆಂದೋಲನವಾಗಿ ಬೆಳೆದು ಭದ್ರವಾಗಿ ಬೇರೂರುವಂತೆ ಮಾಡುವುದು ಪ್ರಾಧಿಕಾರದ ಉದ್ದೇಶ.

ಕನ್ನಡ ಪುಸ್ತಕಗಳನ್ನು ಜನತೆಯ ಹತ್ತಿರ ಕೊಂಡೊಯ್ಯುವ ಪ್ರಯತ್ನವೇ ಮೈಸೂರು ದಸರಾ ಕನ್ನಡ ಪುಸ್ತಕ ಮೇಳ – ೨೦೧೪. ಇದನ್ನು ಇದೇ ಸೆಪ್ಟೆಂಬರ್ ೨೪ ರಿಂದ ಅಕ್ಟೋಬರ್ ೦೩ರವರೆಗೆ ಕಲಾಮಂದಿರ ಆವರಣ, ಮೈಸೂರಿನಲ್ಲಿ ಏರ್ಪಡಿಸಲು ನಿರ್ಧರಿಸಲಾಗಿದೆ. ಈ ಮೇಳದಲ್ಲಿ ಭಾಗವಹಿಸುವ ಕನ್ನಡ ಪುಸ್ತಕ ಪ್ರಕಾಶಕರಿಗೆ ಪುಸ್ತಕ ಮಳಿಗೆಯನ್ನು ಬಾಡಿಗೆಗೆ ನೀಡಲಾಗುವುದು. ರಾಜ್ಯದ ಹಾಗೂ ಹೊರನಾಡಿನ ಎಲ್ಲಾ ಪುಸ್ತಕ ಪ್ರಕಾಶಕರು ಈ ಮೇಳದಲ್ಲಿ ಭಾಗವಹಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇನೆ.

**ಡಾ. ಬಂಜಗೆರೆ ಜಯಪ್ರಕಾಶ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾದಿಕಾರ,
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು –೫೬೦ ೦೦೨

# ಮೈಸೂರು ದಸರಾ ಕನ್ನಡ ಪುಸ್ತಕ ಮೇಳ - ೨೦೧೪
## (ಭಾಗವಹಿಸಲು ಅರ್ಜಿ ನಮೂನೆ)

ದಿನಾಂಕ ೨೪.೦೯.೨೦೧೪ ರಿಂದ ೦೩.೧೦.೨೦೧೪ ರವರೆಗೆ
ಸ್ಥಳ : ಕಾಡಾ ಮೈದಾನ, ಮೈಸೂರು

೧. ಪ್ರಕಾಶನ ಸಂಸ್ಥೆಯ ಹೆಸರು

೨. ಪ್ರಕಾಶನ ಸಂಸ್ಥೆಯ ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆ

ಮಾಲೀಕ/ಪ್ರತಿನಿಧಿಗಳ ದೂರವಾಣಿ ಸಂಖ್ಯೆ

೩. ಅಗತ್ಯವಿರುವ ಮಳಿಗೆ ಒಂದು ಎರಡು ಮೂರು

೪. ಪ್ರದರ್ಶನ ಹಾಗೂ ಮಾರಾಟಕ್ಕೆ ಇಡಬಹುದಾದ ಶೀರ್ಷಿಕೆಗಳ ಸಂಖ್ಯೆ

೫. ಬಾಡಿಗೆ ರೂ. ೨೫೦೦-೦೦ ಸಂದಾಯ ಮಾಡಲಾಗಿದೆಯೇ?
ಡಿ.ಡಿ./ ರಸೀದಿ ಸಂಖ್ಯೆ ಮತ್ತು ದಿನಾಂಕ

೬. ಠೇವಣಿ ಕಟ್ಟಲಾಗಿದೆಯೇ?
ಡಿ.ಡಿ. ಸಂ.

೭. ಮಳಿಗೆ ಮುಂದೆ ಬರೆಸಬೇಕಾದ ಹೆಸರನ್ನು ಸ್ಪಷ್ಟವಾಗಿ ತಿಳಿಸಿ

ಮೈಸೂರಿನಲ್ಲಿ ನಡೆಯಲಿರುವ ಮೈಸೂರು ದಸರಾ ಕನ್ನಡ ಪುಸ್ತಕ ಮೇಳ ೨೦೧೪ರ ಯಶಸ್ಸು ಮತ್ತು ಪರಿಣಾಮಕಾರಿ ನಿರ್ವಹಣೆಗೆ ಗೊತ್ತುಪಡಿಸಿದ ಎಲ್ಲಾ ನಿಯಮಗಳನ್ನು ನಾವು ಒಪ್ಪಿಕೊಂಡಿದ್ದು, ಯಾವುದೇ ನಿಯಮಗಳನ್ನು ಉಲ್ಲಂಘನೆ ಮಾಡುವುದಿಲ್ಲವೆಂದು ಪ್ರಮಾಣೀಕರಿಸುತ್ತೇವೆ. ಸಂತೋಷದಿಂದ ಈ ಮೇಳದಲ್ಲಿ ಭಾಗವಹಿಸುತ್ತೇವೆ.

ದಿನಾಂಕ :
ಸ್ಥಳ : ಪ್ರಕಾಶಕರ ಹೆಸರು / ಸಹಿ / ಮುದ್ರೆ